## ಕವಿ ಮನಸು

### ಲೋಕ ಹಾಗೂ ಹೀಗೂ

ಕೆಲವರಿಗೆ
ಮಕ್ಕಳಿರುವವರು
ಮಕ್ಕಳೊಂದಿಗೆ
ಹೊಂದಿಕೆಯಿಲ್ಲ ।

ಕೆಲವರಿಗೆ
ಮಕ್ಕಳು ಇರುವುದಿಲ್ಲ
ಅನಾಥ ಮಕ್ಕಳ
ಸಾಕುವ ತಾಳ್ಮೆ ಇಲ್ಲ ।

ಕೆಲವರಿಗೆ
ಶ್ರೀಮಂತಿಕೆ ಇರುವುದು
ಬಡವರ ಕಂಡರೆ
ಕನಿಕರ ಇಲ್ಲ ।

ಕೆಲವರಿಗೆ
ಬಡತನ ಇರುವುದು
ಕನಿಕರ ಪಡುವರು
ಕೊಡಲು ಅಸಹಾಯಕರು ।

ಕೆಲವರಿಗೆ
ದೇವರ ಮೇಲೆ ಪ್ರೀತಿ
ದಾನ ಕೇಳಿದರೆ
ಹಿಂದೆ ಸರಿಯುವರು ।

ಲೋಕ ಹಾಗೂ ಇದೆ
ಹೀಗೂ ಇದೆ
ಯಾರ್ಯಾರಿಗೆ ಏನೆಂದು ಬೇಕೋ
ಅದನ್ನೇ ಮಾಡುವರು ತರ್ಕ ಬೇಡ.

– ಚಂದ್ರಶೇಖರಯ್ಯ ರೋಣದಮಠ
ಹೊಸಪೇಟೆ


### ಚಿದಂಬರ ರಹಸ್ಯ.



ನಟರಾಜನ ಆನಂದ ತಾಂಡವದ ನೃತ್ಯ
ಅಜ್ಞಾನವನ್ನು ಜ್ಞಾನದಿಂದ ಕಳೆಯುವ ಸತ್ಯ
ಅರಿತರೆ ಭಗವಂತನಿಗೆ ಶರಣಾಗುವೆ ನಿತ್ಯ
ಇದುವೇ ಚಿದಂಬರನ ಚಿದಂಬರ
ರಹಸ್ಯ.

– ಮಂಜುಶ್ರೀ ಮುರಳೀಧರ್.
ತೋರಣಗಲ್ಲು, ಬಳ್ಳಾರಿ.

### ತುಂಗಭದ್ರಾ ನೀರಿನ ಮಟ್ಟ



| ಗುರುವಾರ: 15–02–2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1587.87 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 142 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.357 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1611.21 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8146 ಕ್ಯುಸೆಕ್ |
| ಸಾಮರ್ಥ್ಯ | 40.011 ಟಿಎಂಸಿ |

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಹಿಮಾಲಯದ ಕಷ್ಟಗಳು

ಮುಂದುವರೆದ ಭಾಗ

ಕೇದಾರ ಕಾಂಟದ ಚಾರಣದಲ್ಲಿ ಸೇಬುತೋಟದ ಕೂಲಿಕಾರ ರಾಣಾ, ಎರಡು ಗಜನಿಂಬೆಯನ್ನು ಕೈಯಲ್ಲಿ ಹಿಡಿದುಕೊಂಡು ದಾರಿಯಲ್ಲಿ ಸಿಕ್ಕಿದ. ಬಂಧುವೊಬ್ಬನನ್ನು ಹುಡುಕಿ ತೋಟದಿಂದ ತೋಟಕ್ಕೆ ಅಲೆಯುತ್ತಿದ್ದ ಈತ, ನೇಪಾಲದಿಂದ ಸೇಬು ಕಟಾವಿಗೆ ಜನರನ್ನು ಕರೆದುಕೊಂಡು ಬರುವ ಸೇರೆಗಾರ. ಇವರಿಗೆಲ್ಲ ಹೋಲಿಸಿದರೆ ಧರ್ಮಶಾಲಾದಲ್ಲಿ ನಮ್ಮನ್ನು ಸುತ್ತಾಡಿಸಿದ ಟ್ಯಾಕ್ಸಿಚಾಲಕ ನವೀನ್, ಆಧುನಿಕ. ಎಲ್ಲರಿಗೂ ಮೇಲೆ ಬಿದ್ದು ಮಾತಾಡಿಸುತ್ತಿದ್ದನು. ನೇಪಾಳಿ ಟಿಬೆಟಿಯನ್ ಹಿಂದಿ ಪಹಾಡಿ ಇಂಗ್ಲೀಶು ಕಲಿತಿದ್ದ ಅವನಿಗೆ ಗ್ರಾಹಕರನ್ನು ಸೆಳೆವ ಕಲೆಯಿತ್ತು. ತಾಯ್ನಾಡು ನೇಪಾಳದ ಮೇಲೆ ಪ್ರೀತಿ; ಅಲ್ಲಿನ ಅಂತರ್ಯುದ್ಧ ಬಡತನಗಳ ಮೇಲೆ ಬೇಸರ. ಭಾರತದಲ್ಲೇ ಬದುಕಲು ನಿರ್ಧರಿಸಿದ್ದನು.

ಸಿಮ್ಲಾ ಮನಾಲಿ ಧರ್ಮಶಾಲಾ ಕುಲು ಮಂಡಿಗಳಲ್ಲಿ ಕಾಶ್ಮೀರಿ ಕೂಲಿಕಾರರು, ಗೋವಾ ಮಂಗಳೂರಿನಲ್ಲಿ ಉತ್ತರ ಕರ್ನಾಟಕದ ಜನರಂತೆ, ಬಸ್ಸು-ರೈಲು ನಿಲ್ದಾಣಗಳಲ್ಲಿ ಕಾಣಸಿಗುವರು. ಕೈಯಲ್ಲಿ ನೂಲಹಗ್ಗ-ಲಗೇಜನ್ನು ಕಟ್ಟಿ ಬೆನ್ನಮೇಲೆ ಏರಿಸಿ ಹಿಡಿದುಕೊಳ್ಳಲು. ಪರ್ವತ ಪ್ರದೇಶಗಳಲ್ಲಿ ಸರಕನ್ನು ಬೆನ್ನಮೇಲೇ ಹೊತ್ತು ಸಾಗಿಸಬೇಕು. ಶಿಮ್ಲಾದಲ್ಲಿ ಕ್ವಿಂಟಾಲ್ ಒಜ್ಜೆಯ ಹಿಟ್ಟಿನ ಚೀಲವನ್ನು ಒಬ್ಬ ಕಾಶ್ಮೀರಿ, ಕೆಳಗಿರುವ ಬಸ್ಸುನಿಲ್ದಾಣದಿಂದ ಘಟ್ಟದ ಮೇಲಿನ ಅಂಗಡಿಗೆ ಹೊತ್ತು ತಂದನು. ನಾನು-ಬಾನು ಸಿಮ್ಲಾದಲ್ಲಿ ರೈಲಿನಿಂದ ಇಳಿದೊಡನೆ ಒಬ್ಬ ಕಾಶ್ಮೀರಿ ಹಮಾಲಿ ಬಂದು ಲಗೇಜನ್ನು ಎತ್ತಿಕೊಳ್ಳುತ್ತೇನೆಂದ. ನೀಳಮೂಗಿನ ಬೆಕ್ಕಿನ ಕಣ್ಣಿನ ನಲ್ವತ್ತರ ಪ್ರಾಯ. ಲಗೇಜು ಹೆಚ್ಚಿರಲಿಲ್ಲ. ಹೋಟೆಲು ಸಮೀಪವಿತ್ತು. ಬೇಡವೆಂದೆವು. ಆತ "ಹೋಟೆಲ್ ದೂರವಿಲ್ಲ ನಿಜ. ಆದರೆ ದಿನ್ನೆ ಹತ್ತಬೇಕು. ತೋಚಿದಷ್ಟು ಕೊಡಿ" ಎಂದ. ಆತ ಸೂಟುಕೇಸನ್ನು ಹೋಟೆಲಿನಲ್ಲಿ ಇಳಿಸಿದ ಬಳಿಕ ಕೇಳಿದೆ:

**"ಕಾಶ್ಮೀರದಿಂದ ಇಲ್ಲೀತನಕ ಬಂದೆ?"**

"ಅಲ್ಲೂ ಇದೇ ಕೆಲಸ ಮಾಡುತ್ತಿದ್ದೆ. ಈಗಲ್ಲಿ ಪ್ರಕ್ಷುಬ್ಧತೆ. ಪ್ರವಾಸಿಗರು ಕಡಿಮೆಯಾಗಿದ್ದಾರೆ"

**"ಇಲ್ಲೆಲ್ಲಿ ವಾಸ?"**

"ರಾತ್ರಿ ಅಂಗಡಿಗಳು ಮುಚ್ಚಿದ ಬಳಿಕ ಶಟರುಗಳ ಮುಂದೆ ಇಲ್ಲವೇ ರೈಲ್ವೇ ನಿಲ್ದಾಣದಲ್ಲಿ ಮಲಗುತ್ತೇವೆ. ಸ್ವಲ್ಪ ಹಣ ಊರಿಗೆ ಕಳಿಸುತ್ತೇವೆ. ಮಕ್ಕಳು ಶಾಲೆಗೆ ಹೋಗುತ್ತಾರೆ"

**"ಕಾಶ್ಮೀರದಲ್ಲಿ ಈಗ ಏನಾಗುತ್ತಿದೆ?"**

"ಸಾಬ್, ಎರಡನೇ ಟ್ರೈನು ಬರುವ ಹೊತ್ತಾಯಿತು. ತಡವಾದರೆ ಗಿರಾಕಿಗಳು ತಪ್ಪಿಹೋಗುತ್ತಾರೆ"

ನನ್ನ ಪ್ರಶ್ನೆ ಅನಗತ್ಯವಾಗಿತ್ತೇ? ರಾಜಕೀಯವಾಗಿ ಕಿರಿರಿಯಾದ ಪ್ರಶ್ನೆಗೆ ಉತ್ತರಿಸುವುದರಿಂದ ತಪ್ಪಿಸಿಕೊಳ್ಳಲು ಹೀಗೆಂದನೆ? ಶಿಮ್ಲಾದ ಸುಪ್ರಸಿದ್ಧ ಚರ್ಚಿನಂಗಳ 'ರಿಡ್ಜ್' ಚಳಿಗಾಲದಲ್ಲಿ ಹಿಮದಿಂದ ತುಂಬಿಹೋಗುತ್ತದೆ. ಎತ್ತರದಲ್ಲಿರುವ ಇಲ್ಲಿಂದ ಕೆಳಗಿನ ಕಣಿವೆಗಳೂ ದೂರದ ದೇವದಾರು ಕಾಡುಗಳೂ ಸೂರ್ಯಾಸ್ತವೂ ಕಾಣುತ್ತವೆ. ಸಂಜೆ ಹೊತ್ತಿಗೆ ಪ್ರವಾಸಿಗರೂ ನಗರದ ಸಿರಿವಂತರೂ ಬೆಚ್ಚನೆ ಬಟ್ಟೆಯುಟ್ಟು, ಕೂಸುಗಳನ್ನು ತಳ್ಳುಗಾಡಿಯಲ್ಲಿ ಕೂರಿಸಿಕೊಂಡು ಬೆಡಗಿನಿಂದ ಸೇರುವರು. ಸನಿಹದಲ್ಲಿರುವ ಪಾಳು ಮನೆಗಳ ಪಡಸಾಲೆಗಳಲ್ಲಿ ಪೋರ್ಟರುಗಳೆಲ್ಲ ಸೇರಿ, ದಿನದ ದುಡಿಮೆ ಲೆಕ್ಕಹಾಕುತ್ತ, ಬೀಡಿ ಚಹ ಸೇವಿಸುತ್ತ, ನೇಪಾಳಿ ಕಾಶ್ಮೀರಿ ಡೋಗ್ರಿ



ಪಹಾಡಿಯಲ್ಲಿ ಮಾತಾಡಿಕೊಳ್ಳುತ್ತ ಇರುವರು. ಹುಟ್ಟಿದೂರನ್ನು ಬಿಟ್ಟು ಬಂದಿರುವ ಇವರ ಮೊಗದಲ್ಲಿ ಬದುಕನ್ನು ಕಟ್ಟಿಕೊಳ್ಳುತ್ತಿರುವ ತೃಪ್ತಿಯೂ ನಾಳೆ ಹೇಗೆಂಬ ಚಿಂತೆಯೂ ಒಟ್ಟಿಗಿರುತ್ತವೆ.

ಹಿಮಾಲಯದಲ್ಲಿ ಕೂಲಿಗಾಗಿ ಗೋಗರೆವವರು ಇರುವಂತೆ, ಕಸುಬನ್ನು ಚಿಕ್ಕಾಸಿನ ದುರಾಸೆಯಿಲ್ಲದೆ ಮಾಡುವ, ಘನತೆಯಿಂದ ವರ್ತಿಸುವ ಕಸುಬುದಾರರನ್ನೂ ಕಾಣಬಹುದು. ಯಮುನೋತ್ರಿಯ ಹಾದಿಯ ಸಣ್ಣ ಊರಲ್ಲಿ ವಸ್ತಿ ಮಾಡಿದ್ದೆವು. ನನ್ನ ಹರಿದ ಶೂಗಳನ್ನು ನೋಡಿದ ನಮ್ಮ ತಂಡದ ನಾಯಕನು, ಆತಂಕದಿಂದ 'ಕೇದಾರ ಯಮುನೋತ್ರಿ ಟ್ರೆಕ್ ಮಾಡಬೇಕು. ಹರಿದ ಶೂ ತಂದಿದ್ದೀರಿ' ಎಂದನು. ಶೂಗಳ ಸೋಲ್ ಚೆನ್ನಾಗಿತ್ತು. ಆದರೆ ಮೈಹರಿದಿತ್ತು. ಅದರೊಳಗೆ ತಂಗಾಳಿ ಹಿಮ ನುಗ್ಗಿ ಪಾದವನ್ನು ಶೀತಲಗೊಳಿಸುವ ಅಪಾಯವಿತ್ತು. ಹೊಲಿಸಲೆಂದು ಚಮ್ಮಾರನಲ್ಲಿಗೆ ಹೋದೆ. ನೀಟಾಗಿ ಹೊಲಿದುಕೊಟ್ಟ. ನೂರು ರೂಪಾಯಿ ಕೊಟ್ಟು ಚಿಲ್ಲರೆ ಬೇಡವೆಂದೆ. 'ನನ್ನ ಕೂಲಿ ಐವತ್ತು ರೂಪಾಯಿ. ಅದಕ್ಕಿಂತ ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲ' ಎಂದು ಐವತ್ತು ರೂಪಾಯಿ ಹೊರಳಿಸಿದನು. ಕಲ್ಯಾಣದ ಆಯ್ದಕ್ಕಿ ಲಕ್ಕಮ್ಮ ನೆನಪಾದಳು.

ಹಿಮಾಲಯದಲ್ಲಿ ಅಲ್ಲಿನ ಗಿಡಮರ ಪರ್ವತ ಕಣಿವೆಗಳಂತೆ ಸಹಜವಾದ ಆರೋಗ್ಯವನ್ನೂ ಚೆಲುವನ್ನೂ ಪಡೆದ ಯುವಕ-ಯುವತಿಯರೂ ಉಂಟು. ಜುಡುತಲಾವ್ ಹಾದಿಯಲ್ಲಿದ್ದ ಸ್ಥಳೀಯ ಗೈಡ್ ಶಾರೂಕ್ (ನಟ ಶಾರೂಕ್ ಖಾನನಂತೆ ಮುಖಚಹರೆ ಇದ್ದುದರಿಂದ ಹೀಗೆ ಕರೆಯುತ್ತಿದ್ದರು) ಚಂದದ ಯುವಕ. ಹಿಮಪಾತದ ಹಾದಿಯಲ್ಲಿ ಬೀಳದಂತೆ ನಮ್ಮ ತಂಡದ ಮಹಿಳೆಯರ ನಡೆಸಿದವನು. ಈ ಮಹಿಳೆಯರಾದರೂ ಅವನ ಪಾಣಿಗ್ರಹಣದಲ್ಲಿ ಎಷ್ಟು ಸಂತೋಷದಲ್ಲಿ ನಡೆಯುತ್ತಿದ್ದರು– ಶೂನ್ಯ ಡಿಗ್ರಿ ತಾಪಮಾನದಲ್ಲೂ ಗಂಡಂದಿರ ಹೊಟ್ಟೆಗೆ ಬೆಂಕಿ ಬೀಳುವಂತೆ. ಶಾರೂಕನಿಗೆ ತನ್ನ ಚೆಲುವಿನ ಪರಿವೆಯೇ ಇರಲಿಲ್ಲ. ಚಾರಣಿಗರ ಪ್ರಾಣಹೋಗುವ



**ರಹಮತ್ ತರೀಕೆರೆ**
ಸಂಸ್ಕೃತಿ ಚಿಂತಕರು

ಅಪಾಯಕರ ಇಳಿಜಾರಿನಲ್ಲಿ ಏಕಾಗ್ರತೆಯಲ್ಲಿ ಕರ್ತವ್ಯ ನಿಭಾಯಿಸುತ್ತಿದ್ದನು. ಹೊಳೆಗಳಲ್ಲಿ ತೆಪ್ಪ ನಡೆಸುವ ಬೆಸ್ತರಂತೆ, ಪೋರ್ಟರು-ಗೈಡುಗಳು ಅಂಗೈಯಲ್ಲಿ ಜೀವವಿಟ್ಟು ಚಾರಣಿಗರನ್ನು ರಕ್ಷಿಸುವವರು. ಯಾರೂ ಅರಿಯದ ಈ ವೀರರ ದುಡಿಮೆಗೂ ಪಡೆವ ಸಣ್ಣ ಸಂಭಾವನೆಗೂ ಸಂಬಂಧವೇ ಇಲ್ಲ. ಮತ್ತೊಬ್ಬ ಹಾದಿತೋರುಗ ಭರೂಟ, ಹಿಮಾಲಯದ ಹೂವಿನ ಇಂಗ್ಲಿಷ್ ಹೆಸರುಗಳಿಗಾಗಿ ಪರದಾಡುತ್ತಿದ್ದ. ನನಗೊಂದು ಪುಸ್ತಕ ಕಳಿಸಿಕೊಡಿ ಎಂದು ಬೇಡಿಕೊಂಡ. ಕಲಿತ ನಗರವಾಸಿ ಚಾರಣಿಗರಿಗೆ ಆಂಗ್ಲ ಹೆಸರೂ ಹೇಳಿ ಮೆಚ್ಚುಗೆ ಪಡೆಯಬೇಕು. ಹಿಮಾಲಯ ಕುರಿತ ಪುಸ್ತಕ ಓದಿಕೊಂಡು ಒಳ್ಳೆಯ ಗೈಡಾಗಬೇಕು ಎಂದು ತವಕ ಅವನಿಗೆ. ಆದರೆ ಇಂಗ್ಲೀಶ್ ಬಾರದು. ಹಿಂದಿಯಲ್ಲಿದ್ದರೆ ಪುಸ್ತಕ ಕಳಿಸಿಕೊಡಿ ಎಂದು ಬೇಡಿಕೊಂಡನು.

ಚಂದ್ರಖಾನಿ ಚಾರಣ ಮುಗಿಸಿ ಕುಲುವಿನಲ್ಲಿರುವ ಬೇಸ್‌ಕ್ಯಾಂಪಿಗೆಂದು, ಬಿಯಾಸ್ ಹೊಳೆದಡದ ನಗ್ಗರ್ ಪಟ್ಟಣದಲ್ಲಿ ಬಸ್ಸಿಗೆಂದು ಕಾಯುತ್ತಿದ್ದೆವು. ವಾರದಿಂದ ಆಧುನಿಕತೆ ನಾಗರಿಕತೆಯ ಸಂಕೇತಗಳಾದ ಟಾರುರಸ್ತೆಯನ್ನಾಗಲಿ ಬಸ್ಸುಕಾರುಗಳನ್ನಾಗಲಿ ಜನಜಂಗುಳಿಯನ್ನಾಗಲಿ ಕಂಡಿರಲಿಲ್ಲ. ಹಸಿರುಕಚ್ಚಿದ ಕಾಡು, ಕಣ್ಣುಕೋರೈಸುವ ಹಿಮ, ಮರಗಟ್ಟಿಸುವ ತಣ್ಣೀರು, ನಿರ್ಜನ ಹಳ್ಳಿಗಳು, ದಿನಾ ಹತ್ತು ಕಿಮೀ ನಡಿಗೆ-ಸಾಕು ಸಾಕಾಗಿತ್ತು. ಕಡಲಿನ ಅಥವಾ ಕಾಡಿನ ಏಕಾಂತ, ಮೌನ ಮತ್ತು ಏಕತಾನವೆನಿಸುವ ಬಣ್ಣದ ಲೋಕದೊಳಗಿದ್ದಾಗ ಉಸಿರುಗಟ್ಟಿದ ಅನುಭವವೂ ಆಗುತ್ತದೆ. ಅಲ್ಲಿಂದ ಹೊರಬಂದಾಗ ನಾಗರಿಕ ಲೋಕದ ರಸ್ತೆ ಬಸ್ಸು ಅಂಗಡಿ ಪೇಟೆಗಳು ಹಿತಕರವಾದ ಬಿಡುಗಡೆಯನ್ನು ಕೊಡುತ್ತವೆ. ಇದೇ ನಾಗರಿಕ ಲೋಕದಿಂದಲ್ಲವೇ ನಾವು ದಣಿದು ಹಿಮಾಲಯವನ್ನು ಹೊಕ್ಕಿದ್ದು? ಜೀವನವೆಂದರೆ, 'ಇರುವುದೆಲ್ಲವ ಬಿಟ್ಟು ಇರದುದೆಡೆಗೆ ತುಡಿಯುವುದು' ಮಾತ್ರವಲ್ಲ. ಮತ್ತೆಮತ್ತೆ ಇರುವುದಕ್ಕೆ ಮರಳುವುದು ಕೂಡ.

ನಮ್ಮ ತಂಡದಲ್ಲಿದ್ದ ಚೆನ್ನೈ ಹುಡುಗಿಯರು, ನಾಗರಿಕ ಲೋಕಕ್ಕೆ ಕರೆದೊಯ್ಯುವ ಮಾರ್ಗದರ್ಶಿಯಂತಿದ್ದ ಟಾರುರಸ್ತೆಗೆ ನಾಟಕೀಯವಾಗಿ



ಬಾಗಿ ನಮಿಸಿದರು.

ನಮ್ಮ ಚೇಷ್ಟೆಗಳನ್ನು ನಿಂತು ನೋಡುತ್ತಿದ್ದ ಒಬ್ಬ ಮುದುಕ 'ನಿಮಗೆ ಹಿಮಾಚಲ ಹೇಗನಿಸಿತು?' ಎಂದು ಕೇಳಿದನು. ಕೆಲವರು 'ಬಾಪ್‌ರೇ ಏ ಥಂಡ್ ಸಂಭಾಲಾ ನಹಿಜಾತಿ' ಎಂದರು. ಮತ್ತೆ ಕೆಲವರು 'ಸೂಪರ್' ಎಂದರು. ಮುದುಕನೆಂದ: "ನಿಮ್ಮಂತೆಯೇ ಒಬ್ಬ ಬಿಳಿಯ ಮನುಷ್ಯ ಹಿಮಾಲಯ ನೋಡಲು ಬಂದ. ಹೋಗುವಾಗ ಇಲ್ಲಿಂದ ಬೆಲೆಬಾಳುವ ವಸ್ತುವನ್ನು ತನ್ನ ದೇಶಕ್ಕೆ ಕೊಂಡೊಯ್ಯಬೇಕು ಅನಿಸಿತು. ನಮ್ಮವರಿಗೆ ಕೇಳಿದ: 'ನಿಮ್ಮ ದೇಶದ ಅತ್ಯುತ್ತಮ ವಸ್ತು ಯಾವುದು?' ಆಗ ನಮ್ಮ ಹಿರೀಕರು ಹೇಳಿದರಂತೆ: 'ನೀರು, ಗಾಳಿ ಮತ್ತು ಜನರ ವಿಶ್ವಾಸ'.

ನಿಜ, ಹಿಮಾಚಲದಲ್ಲಿ ಸಿಗುವ ಈ ಶ್ರೇಷ್ಠವಸ್ತುಗಳು ಹೊರಗೆ ಖರೀದಿಸಲು ಬಾರದವು. ಹಿಮಾಲಯವನ್ನು ನದಿಗಳ ಸೆಳವಿನಿಂದ ಅದರ ಪರ್ವತದ ವಿಸ್ತಾರ ಎತ್ತರಗಳಿಂದ ನೋಡಿದರೆ ಒಂದು ಅನುಭವ; ಜನರ ವಿಶ್ವಾಸದಿಂದ, ನೀರಿನ ಸ್ವಚ್ಛತೆಯಿಂದ, ಹವೆಯ ತಂಪಿನಿಂದ ಅಳೆದರೆ ಇನ್ನೊಂದೇ ಅನುಭವ. ಹಿಮಾಲಯದಲ್ಲಿ ಈ ಎರಡೂ ಅನುಭವ ಲೋಕಗಳು ಏಕೀಭವಿಸುತ್ತವೆ. ಹಿಮಾಲಯವೆಂದರೆ ಹಿಮಚ್ಛಾದಿತ ಶಿಖರ ಮತ್ತು ಆಳವಾದ ಕಮರಿಗಳು ಮಾತ್ರವಲ್ಲ. ಅಲ್ಲಿ ಬದುಕುವ ಕುರಿಗಾಹಿಗಳು ದನಗಾಹಿಗಳು ರೈತರು ಪೋರ್ಟರುಗಳು ಗೈಡುಗಳು ರೈತರು ಕೂಡ. ಹಿಮಾಲಯ ಭವ್ಯವಾಗಿ ಕಾಣುವುದು ಬೃಹತ್ತಿನಿಂದಲ್ಲ. ತನ್ನೊಳಗಿನ ಜನಜೀವನದಿಂದ. ಅದರೊಳಗಿನ ನಿತ್ಯ ಹೋರಾಟದಿಂದ. ಹಿಮಾಲಯದ ಜನ ಮೂರು ತಿಂಗಳು ಅಗಾಧ ಹಿಮದೊಳಗೆ ಸಮಾಧಿಯಾಗಿ ಬದುಕಿರುವ ಶರಾಲ್ ಗಿಡಗಳಂತೆ; ಹತ್ತುಸಾವಿರ ಅಡಿಯ ಮೇಲೆ ಪರ್ವತವನ್ನು ಆವರಿಸಿಕೊಳ್ಳುವ ಬಂಬಲೂ ಹೂಗಳಂತೆ.

ಹಿಮಾಲಯಕ್ಕೆ ಒಮ್ಮೆ ಹೋಗಿಬಂದರೆ, ಅದು ತನ್ನ ಜನ ಪರ್ವತ ಕಾಡು ಹೊಳೆ ಕಣಿವೆ ಪಶುಪಕ್ಷಿಗಳ ಸಮೇತ ನಮ್ಮ ಭಾವಕೋಶದ ಭಾಗವಾಗುತ್ತದೆ. ಈಚೆಗೆ ಹಿಮಾಚಲದಲ್ಲಿ ಹಿಮಪಾತವಾಯಿತು. ಮಳೆಯಿಲ್ಲದೆ ಸೇಬುಗಳು ದಪ್ಪಗಾಗುತ್ತಿಲ್ಲ ಎಂಬ ಸುದ್ದಿಯಿತ್ತು. ನಮ್ಮದೇ ತೋಟ ಒಣಗುತ್ತಿರುವಂತೆ ಬಾನು ಮರುಗಿದಳು. ಜೋಶಿಮಠ ಕುಸಿಯುತ್ತಿದೆ ಎಂದಾಗ, ನನ್ನೆದೆ ದುಗುಡದಿಂದ ತುಂಬಿತು. ಈಗಲೂ ಹಿಮಾಲಯವೆಂದರೆ, ಹಿಮಪಾತದಲ್ಲಿ ನಮ್ಮ ಕೈಹಿಡಿದು ನಡೆಸಿದ ಸಂಕರಿಯ ಶಾರೂಕ್, ಛನಾಲಿನ ದಾರಿತೋರುಗ ಗುಪ್ತಾರಾಮ, ಚಂದ್ರಖಾನಿಯ ಸೈದರ್‌ಸಿಂಗ್ ಮುಂತಾದವರ ವಿಶ್ವಾಸ ದುಡಿಮೆ ನೆನಪಾಗುತ್ತದೆ. ದೂರದ ಮನೆಗಳಲ್ಲಿ ತಮಗಾಗಿ ಕಾದಿರುವ ಜೀವಗಳಿಗಾಗಿ ಚಳಿಯಲ್ಲಿ ದುಡಿವ ನೇಪಾಳಿ ಕಾಶ್ಮೀರಿ ಪೋರ್ಟರುಗಳ ಸಹನೆ ನೆನಪಾಗುತ್ತದೆ. ಮತ್ತೆ ಮತ್ತೆ ಅಲ್ಲಿಗೆ ಹೋಗಬೇಕೆಂದು ಜೀವ ತುಡಿಯುತ್ತದೆ.

# ಫೆ.17 ರಂದು ಬಸವಣ್ಣನವರ ಭಾವಚಿತ್ರಕ್ಕೆ ಅನಾವರಣ ಸಮಾರಂಭ

## ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಸೂಚನೆ । ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಸಮಾರಂಭ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಫೆ.17 ರಂದು ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವಣ್ಣನವರ ಭಾವಚಿತ್ರ ಅನಾವರಣ ಸಮಾರಂಭ ಆಯೋಜಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಸೂಚನೆ ನೀಡಿದ್ದಾರೆ.

12ನೇ ಶತಮಾನದಲ್ಲಿ ಕ್ರಾಂತಿಯೋಗಿ ಶ್ರೀ ಜಗಜ್ಯೋತಿ ಬಸವಣ್ಣನವರು ಪ್ರತಿಪಾದಿಸಿದ ಸಾರ್ವತ್ರಿಕ ಮೌಲ್ಯಗಳಾದ ಜಾತಿ ರಹಿತ ಸಮಾಜ, ಕಾಯಕದ ಮಹತ್ವ ಮತ್ತು ವರ್ಗರಹಿತ ಸಮಾಜ, ಜೀವನ ಮಾರ್ಗ ಸರ್ವಕಾಲಕ್ಕೂ ದಾರಿದೀಪವಾಗಿದೆ. ಸಮಾಜದಲ್ಲಿ ಮಹಿಳಾ ಅಸಮಾನತೆ ಹಾಗೂ ಮೂಢನಂಬಿಕೆಗಳ ಬಗ್ಗೆ ವಿರೋಧ ವ್ಯಕ್ತಪಡಿಸಿರುತ್ತಾರೆ. ಅಲ್ಲದೇ ಜಗಜ್ಯೋತಿ ಬಸವಣ್ಣನವರು ಸಾರ್ವತ್ರಿಕ ಮತ್ತು ಸರ್ವಕಾಲಿಕ ಸರ್ವಜನ ಸಮಭಾವದ ತಾತ್ವಿಕತೆಗಳ ಮೂಲಕ ಕಲ್ಯಾಣ ಸಮಾಜವನ್ನು ಕಟ್ಟುವುದಕ್ಕೆ ಬೇಕಾದ ನೀತಿಯನ್ನು ಬೋಧಿಸಿರುವುದರಿಂದ ನಮ್ಮ ದೇಶದ ಸಂವಿಧಾನದ ಆಶಯಗಳಿಗೆ ಅವರ ಚಿಂತನೆಗಳು ಸಾಂಸ್ಕೃತಿಕ ರಾಯಭಾರಿತ್ವಕ್ಕೆ ಸಮರ್ಥನೀಯವಾದ ನೆಲೆ ಒದಗಿಸಿರುವ ಮೇರೆಗೆ ಶ್ರೀ ಜಗಜ್ಯೋತಿ



ಬಸವಣ್ಣನವರನ್ನು ರಾಜ್ಯ ಸರ್ಕಾರವು "ಕರ್ನಾಟಕ ಸಾಂಸ್ಕೃತಿಕ ನಾಯಕ" ಎಂದು ಘೋಷಿಸಿದೆ ಎಂದು ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನು ಫೆ.13 ರಂದು ಅನಾವರಣಗೊಳಿಸಿದ್ದಾರೆ. ಅದರಂತೆ ಫೆ.17 ರಂದು ರಾಜ್ಯಾದ್ಯಾಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಮತ್ತು ತಾಲೂಕು ಕೇಂದ್ರಗಳಲ್ಲಿ ಸ್ಥಳೀಯ ಶಾಸಕರುಗಳ ನೇತೃತ್ವದಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನು ಅನಾವರಣಗೊಳಿಸುವ ಕಾರ್ಯಕ್ರಮವನ್ನು ಆಯೋಜಿಸಲು ರಾಜ್ಯ ಸರ್ಕಾರವು ನಿರ್ದೇಶಿಸಿದೆ ಎಂದು ತಿಳಿಸಿದ್ದಾರೆ.

ಆದ್ದರಿಂದ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಹಾಗೂ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ "ಸಾಂಸ್ಕೃತಿಕ ನಾಯಕರಾದ ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನು ಅನಾವರಣಗೊಳಿಸುವ ಕಾರ್ಯಕ್ರಮವನ್ನು ಆಯೋಜಿಸಿ, ಬಸವಣ್ಣನವರ ಭಾವಚಿತ್ರವನ್ನು ಕಡ್ಡಾಯವಾಗಿ ಅಳವಡಿಸಬೇಕು.

ಜಗಜ್ಯೋತಿ ಬಸವಣ್ಣನವರ ಭಾವಚಿತ್ರದ ಕೆಳಗೆ "ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ" ಎಂಬ ಅಡಿಬರಹ ಮುದ್ರಿಸಿ ಅಳವಡಿಸಬೇಕು. ಭಾವಚಿತ್ರದ ಡಿಜಿಟಲ್ ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅಥವಾ ಜಾಲತಾಣ https://kannadasiri.Karnataka.Gov.in ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

# ಫೆ.26, 27ಕ್ಕೆ ರಾಜ್ಯಮಟ್ಟದ ಬೃಹತ್ ಉದ್ಯೋಗ ಮೇಳ

## ಕೌಶಲ್ಯಾಭಿವೃದ್ಧಿ ಅಧಿಕಾರಿ ಪಿ.ಎಸ್.ಹಟ್ಟಪ್ಪ ಹೇಳಿಕೆ

■ ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ವತಿಯಿಂದ ಬೆಂಗಳೂರಿನ ಅರಮನೆ ಮೈದಾನದಲ್ಲಿ ಫೆ.26 ಮತ್ತು 27 ರಂದು ರಾಜ್ಯಮಟ್ಟದ ಬೃಹತ್ ಉದ್ಯೋಗ ಮೇಳವನ್ನು ಅಯೋಜಿಸಲಾಗಿದ್ದು, ಜಿಲ್ಲೆಯ ನಿರುದ್ಯೋಗಿ ಯುವಕ ಯುವತಿಯರು ಭಾಗವಹಿಸಬಹುದು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪಿ.ಎಸ್.ಹಟ್ಟಪ್ಪ ಅವರು ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯದ ನಿರುದ್ಯೋಗಿ ಯುವಕ ಯುವತಿಯರಿಗೆ ಉದ್ಯೋಗ ದೊರಕಿಸುವ ಸಲುವಾಗಿ ವಿವಿಧ ಇಲಾಖೆಗಳ (ಬೃಹತ್ ಕೈಗಾರಿಕೆ, ಉನ್ನತ ಶಿಕ್ಷಣ, ಯುವಸಬಲೀಕರಣ, ಕೌಶಲ್ಯಾಭಿವೃದ್ಧಿ ಇಲಾಖೆ, ಕಾರ್ಮಿಕ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಮಾಜ ಕಲ್ಯಾಣ ಇತ್ಯಾದಿ) ಸಚಿವರನ್ನೊಳಗೊಂಡ ಉನ್ನತ ಮಟ್ಟದ ಸಮಿತಿಯನ್ನು ರಚಿಸಿ ಸಮಿತಿಯ ಮಾರ್ಗದರ್ಶನದಂತೆ ರಾಜ್ಯಮಟ್ಟದ ಬೃಹತ್ ಉದ್ಯೋಗ ಮೇಳ ಅಯೋಜಿಸಲಾಗಿದೆ.

ಈ ಉದ್ಯೋಗ ಮೇಳದಲ್ಲಿ ಸುಮಾರು 500 ಕಂಪನಿಗಳು ಭಾಗವಹಿಸಿ ತಮ್ಮಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಿವೆ. ಈ ಮೇಳದಲ್ಲಿ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಿಂದ ಎಲ್ಲಾ ವಿದ್ಯಾರ್ಹತೆಯ ವಿದ್ಯಾರ್ಥಿಗಳು ಹಾಗೂ ಖಾಸಗಿ ವಲಯದ ಯಾವುದೇ ನಿಯೋಜಕರು (ಕಂಪನಿಗಳು) ಭಾಗವಹಿಸಬಹುದಾಗಿದೆ.

ಅಭ್ಯರ್ಥಿಗಳು ಮತ್ತು ಕಂಪನಿಗಳು ಈ https://udyogamela.skillconnect.kaushalkar.com/ ವೆಬ್‌ಸೈಟ್‌ನಲ್ಲಿ ಮುಂಚಿತವಾಗಿ ನೋಂದಣಿ ಮಾಡಿಕೊಳ್ಳುವುದರ ಮೂಲಕ ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಚೇರಿ, ಬಳ್ಳಾರಿ ಹಾಗೂ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ಮೊ.9964502514 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.